## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 13-11-2022

### ಬೀದರ ನೂತನ ನಗರ ಠಾಣೆ. ಅಪರಾಧ ಸಂಖ್ಯೆ 196/2022 ಕಲಂ 379 ಐಪಿಸಿ :-

ದಿನಾಂಕ 12/11/2022 ರಂದು 11:45 ಎ,ಎಮ ಗಂಟೆಗೆ ಫಿರ್ಯಾದಿ ಶ್ರೀ. ಬಸವರಾಜ ತಂದೆ ಸುಭಾಶ ಬಿರಾದರ ವಯ:28 ವರ್ಷ ಜಾತಿ:ಲಿಂಗಾಯತ ಉ: ಖಾಸಗಿ ಕೆಲಸ ಸಾ/ಸೈಯಾದ್ರಿ ಲೆಔಟ ನೌಬಾದ ಬೀದರ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ, ಇವರ ಹತ್ತಿರ ಒಂದು ಹೀರೊ ಸ್ಪೆ÷್ಲಂಡರ ಪ್ಲಸ್ ಮೊಟರ ಸೈಕಲ ನಂ. ಕೆಎ38ಎಕ್ಸ್3651 ನೇದನ್ನು 2020 ಸಾಲೀನಲ್ಲಿ ಖರೀದಿಸಿದ್ದು, ಇರುತ್ತದೆ. ದಿನಾಂಕ 31/10/2022 ರಂದು ನನ್ನ ಕೆಲಸ ಮುಗಿಸಿಕೊಂಡು ರಾತ್ರಿ 9:00 ಪಿ.ಎಮ ಗಂಟೆಯ ಸಮಯಕ್ಕೆ ಮೊಟರ ಸೈಕಲನ್ನು ಮನೆಯ ಮುಂದೆ ನಿಲ್ಲಿಸಿ ಊಟ ಮಾಡಿ ರಾತ್ರಿ ಮನೆಯಲ್ಲಿ ಮಲಗಿಕೊಂಡಿದ್ದು, ದಿನಾಂಕ 01/11/2022 ರಂದು ಮುಂಜಾನೆ 6:30 ಎ.ಎಮ್. ಗಂಟೆಯ ಸುಮಾರಿಗೆ ಎದ್ದು, ಮನೆಯಿಂದ ಹೊರಗೆ ಬಂದು ನೋಡಿದಾಗ ಮೊಟರ ಸೈಕಲ ಇಟ್ಟಿದ್ದ ಜಾಗದಲ್ಲಿ ಇದ್ದಿರುವದಿಲ್ಲ. ಕಳ್ಳತನವಾದ ಮೊಟರ ಸೈಕಲ ವಿವರ ಹೀಗಿರುತ್ತದೆ: ಹೀರೊ ಸ್ಪೆಲಂಡರ ಪ್ಲಸ್ ಮೊಟರ ಸೈಕಲ ನಂ. KA38X3651 ಚಾ.ನಂ. MBLHAW123L4J14638 ಇಂಜಿನ ನಂ. HA11EYL4J14401 ಮಾಡಲ್: 2020 ಅಂದಾಜು ಕಿಮ್ಮತ್ತು ರೂ-41,000/-ರೂ ಆಗಿರುತ್ತದೆ. ಕಳುವಾದ ಮೊಟರ ಸೈಕಲನ್ನು ಎಲ್ಲ ಕಡೆಗೆ ಹುಡುಕಾಡಿ ಎಲ್ಲಿಯೂ ಸಿಗದಿದ್ದಾಗA ಠಾಣೆಗೆ ಬಂದು ದೂರು ನೀಡಲು ತಡವಾಗಿರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 164/2022 ಕಲಂ 78(3) ಕೆಪಿ ಕಾಯ್ದೆ ;-

ದಿನಾಂಕ 12/11/2022 ರಂದು ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಖಚಿತ ಮಾಹಿತಿ ಬಂದಿದೆನೆAದರೆ ಗಡವಂತಿ ಗ್ರಾಮದ ವಾಲ್ಮೀಕಿ ಚೌಕ ಹತ್ತಿರ ರೋಡಿನ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ಕೂಗುತ್ತಾ ಮಟಕಾ ಎಂಬ ನಸೀಬಿನ ಜೂಜಾಟದ ನಂಬರ ಬರೆಯಿಸಿರಿ ಒಂದು ರೂಪಾಯಿಗೆ 80 ರೂಪಾಯಿ ಪಡೆಯಿರಿ ಅಂತ ಕೂಗುತ್ತಾ ಸಾರ್ವಜನಿಕರಿಂದ ಹಣ ಪಡೆದುಕೊಂಡು ಕಾಗದದ ಮೇಲೆ ನಂಬರ ಬರೆದುಕೊಳ್ಳುತ್ತಿದ್ದಾನೆ ಅಂತಾ ಮಾಹಿತಿ ಮೇರೆಗೆ ದಿನಾಂಕ 12/11/2022 ರಂದು ಸಾಯಂಕಾಲ 1445 ಗಂಟೆಗೆ ದಾಳಿ ಮಾಡಿ ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದ ವ್ಯಕ್ತಿಗೆ ಹಿಡಿದುಕೊಂಡು ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತನ್ನ ಹೆಸರು ಪ್ರಕಾಶ ತಂದೆ ವೀರಣ್ಣಾ ಜಮಾದಾರ ವಯ 34 ವರ್ಷ ಜಾತಿ ಟೊಕ್ರಿ ಕೊಳಿ ಸಾ// ಗಡವಂತಿ ಅಂತ ತಿಳಿಸಿದನು. ಪಂಚರ ಸಮಕ್ಷಮದಲ್ಲಿ ಅಂಗ ಜಡ್ತಿ ಮಾಡಿದ್ದಾಗ ಅವನ ಹತ್ತಿರ ಮಟಕಾ ಜೂಜಾಟಕಕ್ಕೆ ಸಂಬAಧಿಸಿದ1) ಒಂದು ಬಾಲ್ ಪೆನ್ 2) 12 ಸಣ್ಣ ಮಟಕಾ ಚೀಟಿಗಳು 3) 100 ರೂಪಾಯಿ ಮುಖ ಬೆಲೆಯ 8 ನೋಟುಗಳು 800/- ರೂಪಾಯಿ, 4] 50 ರೂಪಾಯಿ ಮುಖ ಬೆಲೆಯ 8 ನೋಟುಗಳು 400/- ರೂಪಾಯಿ, 5] 20 ರೂಪಾಯಿ ಮುಖ ಬೆಲೆಯ 5 ನೋಟು 100/- ರೂಪಾಯಿ, ಹೀಗೆ ಒಟ್ಟು 1,300/- ರೂಪಾಯಿ ನಗದು ಹಣ ಸಿಕ್ಕಿದ್ದು, ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಭಾಲ್ಕಿ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 188/2022 ಕಲಂ 457, 380 ಐಪಿಸಿ :-

ದಿನಾಂಕ 12/11/2022 ರಂದು 11:00 ಗಂಟೆಗೆ ಸಂಗಪ್ಪಾ ತಂದೆ ಕಾಶೇಪ್ಪಾ ಗೋಣೆ ವಯ 55 ವರ್ಷ ಜಾ: ಲಿಂಗಾಯತ ಉ: ಒಕ್ಕಲುತ ಕೆಲಸ ಸಾ: ಬಸವನಗರ ಭಾಲ್ಕಿ. ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೇನೆಂದರೆ, ಫೀರ್ಯಾದಿಯು ಸುಮಾರು 2 ವರ್ಷಗಳಿಂದ ಭಾಲ್ಕಿನಗರದ ಹೊಲ ಸರ್ವೆ ನಂಬರ್ ನೇದರಲ್ಲಿ ಇರುವ ಶ್ರೀ ಈಶ್ವರ ಖಂಡ್ರೆ ರವರ ತಾಯಿಯವರ ಸಮಾಧಿ ಸ್ಥಳದ ಕಟ್ಟಡವನ್ನು ನೋಡಿಕೊಳ್ಳುತ್ತಾ ಮತ್ತು ಹೊಲದಲ್ಲಿ ಒಕ್ಕಲುತನ ಕೆಲಸ ಮಾಡಿಕೊಂಡಿದ್ದು ಮುಂಜಾನೆ 6 ಗಂಟೆಗೆ ಹೊಲಕ್ಕೆ ಹೋಗಿ ಹೊಲದಲ್ಲಿ ಕೆಲಸ ಮಾಡಿ ಮರಳಿ ರಾತ್ರಿ 7 ಗಂಟೆಗೆ ನಮ್ಮ ಮನೆಗೆ ಬರುತ್ತಿದ್ದು ಎಂದಿನಂತೆ ನಾನು ದಿನಾಂಕ: 11/11/2022 ರಂದು ಮುಂಜಾನೆ 6 ಗಂಟೆಯ ಸುಮಾರಿಗೆ ಮನೆಯಿಂದ ಹೊಲಕ್ಕೆ ಹೋಗಿ ಹೊಲದಲ್ಲಿ ಕೆಲಸ ಮಾಡಿ ಹೊಲದಲ್ಲಿರುವ ಸಮಾದಿ ಸ್ಥಳದಲ್ಲಿರುವ ಕಟ್ಟಡದ ಕೀಲಿ ಹಾಕಿಕೊಂಡು ಮರಳಿ ಮನೆಗೆ ರಾತ್ರಿ 7 ಗಂಟೆಗೆ ಬಂದಿರುತ್ತಾರೆ ದಿ: 12/11/2022 ರಂದು ಮುಂಜಾನೆ 6 ಗಂಟೆಯ ಸುಮಾರಿಗೆ ಮನೆಯಿಂದ ಹೊಲಕ್ಕೆ ಹೋಗಿ ಹೊಲದಲ್ಲಿರುವ ಸಮಾಧಿಯ ಕಟ್ಟಡದ ಬಾಗಿಲು ನೋಡಲು ಬಾಗಿಲಿನ ಕೀಲಿ ಮುರಿದು ಬಾಗಿಲು ತೆರೆದಿದ್ದು ಕಂಡು ಬಂದಿರುತ್ತದೆ. ನಾನು ಕಟ್ಟಡದ ಒಳಗೆ ಹೋಗಿ ನೋಡಲಾಗಿ ಕಟ್ಟಡದ ಒಳಗಿನ ಬೆಡ್ಡ ರೂಮ್ ಕೀಲಿ ಮುರಿದಿದ್ದು ಬೆಡ್ಡ ರೂಮ್ ಒಳಗೆ ಹೋಗಿ ನೋಡಲಾಗಿ ಬೆಡ್ಡ ರೂಮಿನಲ್ಲಿನ ಪಲ್ಲಂಗದ ಮೇಲೆ ಇರುವ ಗಾದಿ

ಮತ್ತು ಚಾದರ ಹಾಗೂ ಇತರೆ ಸಾಮನುಗಳನ್ನು ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಸದರಿ ಘಟನೆಯು ದಿನಾಂಕ 11/11/2022 ರಂದು ರಾತ್ರಿ 8 ಗಂಟೆಯಿಂದ ದಿನಾಂಕ: 12/11/2022 ರಂದು ಮುಂಜಾನೆ 6 ಗಂಟೆಯ ಮಧ್ಯದ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಭಾಲ್ಕಿನಗರದ ಹೊಲ ಸರ್ವೆ ನಂಬರ್ ನೇದ್ದರಲ್ಲಿ ಇರುವ ಶ್ರೀ ಈಶ್ವರ ಖಂಡ್ರೆ ರವರ ತಾಯಿಯವರ ಸಮಾಧಿ ಸ್ಥಳದಲ್ಲಿರುವ ಕಟ್ಟಡದ ಬಾಗಿಲು ಮತ್ತು ಬೆಡ್ಡ್ ರೂಮ್ ಬಾಗಿಲಿನ ಕೀಲಿ ಮುರಿದು ಒಳಗೆ ಪ್ರವೇಶ ಮಾಡಿ ಕಟ್ಟಡದಲ್ಲಿದ್ದ ಗಾದಿ ಮತ್ತು ಚಾದರ ಹಾಗೂ ಇತರೆ ಸಾಮಾನುಗಳು ಅ.ಕಿ;70,000/- ರೂಪಾಯಿ ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.